ಸಾಕ್ಷಿಗೆ ದಿನಾಂಕ 22-09-2023 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 1 P.W.: 1

ಮುಂದುವರೆದ ಪಾಟೀ ಸವಾಲು. ಆರೋಪಿ ಪರ ಶ್ರೀ ಎನ್ ಜಿ ಬಿ ವಕೀಲರಿಂದಃ-

ಆರೋಪಿಯು ಹುಲಿಗೆಮ್ಮಳನ್ನು 30 ವರ್ಷಗಳ ಹಿಂದೆ ಮದುವೆಯಾಗಿರುತ್ತಾನೆಂದರೆ ಸರಿ. ಆರೋಪಿಯು ಹುಲಿಗೆಮ್ಮಳೊಂದಿಗೆ ವಿವಾಹ ವಿಚ್ಛೇದನ ತೆಗೆದುಕೊಂಡಿರುವುದಿಲ್ಲ. ಆದರೆ ಹುಲಿಗೆಮ್ಮಳ ತಂದೆ ಆರೋಪಿಯೊಂದಿಗೆ ಮದುವೆ ಮಾಡಿಕೊಟ್ಟಿರುತ್ತಾರೆ. ಆರೋಪಿತನಿಗೆ ಮದುವೆ ಸಮಯದಲ್ಲಿ ವರದಕ್ಷಿಣೆ ಹಣ ಕೊಡುವಾಗ ಹಲಸೂರು ಬಸಪ್ಪ ಎಂಬ ವ್ಯಕ್ತಿ ಇದ್ದರು. ನಾನು ಮತ್ತು ನನ್ನ ಗಂಡ ಮದುವೆಯಾದ ನಂತರ 7 ವರ್ಷಗಳ ಕಾಲ ಅನ್ಯೋನ್ಯವಾಗಿ ಜೀವನ ನಡೆಸಿರುತ್ತೇವೆ. ನಾನು, ಚಾಸಾ-4, ಚಾಸಾ-5 ಪೊಲೀಸ್ ಠಾಣೆಗೆ ದೂರು ಕೊಡಲು ಹೋಗಿದ್ದೆವು, ಆದರೆ ದಿನಾಂಕ ಮತ್ತು ಸಮಯ ಹೇಳಲಾಗುವುದಿಲ್ಲ. ಸದರಿ ಪ್ರಕರಣದಲ್ಲಿ ನನ್ನ ಗಂಡನ ಮನೆಯ ಹತ್ತಿರ ಒಂದು ಪಂಚನಾಮೆಯನ್ನು ಮಾತ್ರ ಮಾಡಿರುತ್ತಾರೆ ಪಂಚನಾಮೆಯ ಕಾಲಕ್ಕೆ ಯೋಗಪ್ಪ, ವೆಂಕಟಪ್ಪರ ಹನುಮಂತಪ್ಪ ಇನ್ನೂ 5-6 ಜನರಿದ್ದರು. ಪಂಚನಾಮೆ ಕಾಲಕ್ಕೆ ನಾನು ಪೋಲೀಸರಿಗೆ ಯಾವುದೇ ವಸ್ತುಗಳನ್ನು ಕೊಟ್ಟಿರುವುದಿಲ್ಲ. ಪಂಚನಾಮೆಗೆ ಎಷ್ಟು ಜನ ಸಹಿ ಮಾಡಿರುತ್ತಾರೆಂದು ನನಗೆ ಈಗ ಹೇಳಲು ಆಗುವುದಿಲ್ಲ. ಆರೋಪಿಯು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ, ಏನೆಂದು ಬೈದಿರುತ್ತಾರೆಂದು ಈಗ ಹೇಳಲು ಆಗುವುದಿಲ್ಲ.

ನಾನು ಇದೇ ನ್ಯಾಯಾಲಯದಲ್ಲಿ ಆರೋಪಿತನ ವಿರುದ್ಧ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿರುತ್ತೇನೆಂದರೆ ಸರಿ. ಕೃತ್ಯಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲವೆಂದರೆ ಸರಿಯಲ್ಲ. ನಾನು ಆರೋಪಿತನಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಕೇಸನ್ನು ಕೊಟ್ಟಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ